ನಿಂತಿದ್ದವನಿಗೆ, ಕಾಲೋನಿಯಲ್ಲಿ ನಾಲ್ಕು ಮನೆ ದಾಟಿ ಆಕಡೆ ಇದ್ದ ಮಸೀದಿಯಿಂದ ಬಂದ 'ಅಲ್ಲಾ ಹೂ ಅಕ್ಬರ್ ಅಲ್ಲಾ...' ಪ್ರಾರ್ಥನೆ ಕಿವಿಗೆ ಬಿದ್ದಿದ್ದೆ ಸಮಯ ಐದೂವರೆಯಾಗಿದ್ದು ಅರಿವಿಗೆ ಬಂತು.

ರೂಮಿನೊಳಗೆ ಬಂದು ಹಾಸಿಗೆಗೆ ಮತ್ತೆ ಒರಗಿ ಕುಳಿತ. ಅಲ್ಲೆ ದಿಂಬಿನ ಕೆಳಗೆ ಇದ್ದ ಮೊಬೈಲ್ ಹಿಡಿದುಕೊಂಡು ಗೂಗಲ್ ತೆಗೆದು ರಿಸಲ್ಟ್ ನೋಟಿಫಿಕೇಶನ್ ನೋಡುತ್ತಾ ಕುಳಿತ, ಅವನಿಗೆ ಬೇಕಾದ ನೋಟಿಫಿಕೇಶನ್ ಇನ್ನೂ ಬಂದಿರಲಿಲ್ಲ. ಹಿಂದಿನ ದಿನ ಆದರ್ಶ ಫೋನ್ ಮಾಡಿದಾಗ 'ಲೇ ರಾಯಾ.. ನಾಳಿಗೆ ನಿಂದು ರಿಸಲ್ಟ್ ಬಿಡ್ತಾರ ನೋಡು, ಈ ಸತಿ ನೀ ಓದಿರ ಪರಿಗೆ ಪಕ್ಕಾ ಪಾಸ್ ಆಗ್ತಿ' ಅಂತ ಹೇಳಿದ್ದು ಇನ್ನೂ ಕಿವಿಯಲ್ಲೆ ಗುಯ್ ಗುಟ್ಟುತ್ತಿತ್ತು. ಅದಾಗಲೇ ಇಪ್ಪತ್ತು ಬಾರಿ ರಿಸಲ್ಟ್ ನೋಟಿಫಿಕೇಶನ್ ಸರ್ಚ್ ಮಾಡಿಯಾಗಿತ್ತು. ಫೋನಿನ ಬೆಳಕಿಗೆ ಕಣ್ಣು ಸೆಳೆದು ನೋಡುತ್ತಿದ್ದವಾದರೂ ವ್ಯಾಟ್ಸಾಪ್, ಇನ್‌ಸ್ಟಾಗ್ರಾಂ, ಸ್ಟೋರಿ, ಸ್ಟೇಟಸ್ ಅಂತೆಲ್ಲ ಬೆರಳುಗಳು ತಂತಾನೆ ಹರಿದಾಡಿ ಬಂದು ನಿಂತವು. ಮತ್ತೆ ವೆಬ್‌ಸೈಟ್ ಚೆಕ್ ಮಾಡಿದ, ಯಾವ ಬದಲಾವಣೆಯೂ ಇರಲಿಲ್ಲ. ಫೋನ್ ಲಾಕ್ ಮಾಡಿ ಪಕ್ಕಕ್ಕಿಟ್ಟ.



ತಲೆಯೆಲ್ಲಾ ಕಲ್ಲಾದಂತ ಅನುಭವವಾಗಿ ಮತ್ತೆ ಕಣ್ಮುಚ್ಚಿದ. 'ಬಡಾssನ ಒಂದು ನೌಕರಿ ತಗಂಬುಡಪಾ, ಮನಿ ತಣ್ಣಗಿರತೈತಿ, ನಮಗರೆ ವಯಸ್ಸಾಗಕುಂತಾವ, ಸಂಬಂದಿಕರೆಲ್ಲ ರೊಕ್ಕ ಮನಿ ಮಾರ ನೋಡಿ ಅಳತಿ ಹಾಕಿ ನಗತಾರ, ಇವರ ನಡಕ ನಾವು ಬದುಕಬೊಕು ರಾಯ..!' ಎಂದ ಅವ್ವನ ಮಾತುಗಳು ಮತ್ತೆ ಕಿವಿಗೆ ಅಪ್ಪಳಿಸಿದವು. ದಿಂಬಿನೊಳಗೆ ಮುಖವಿಟ್ಟಷ್ಟೂ ಮತ್ತದೇ ಮಾತುಗಳು ಪ್ರತಿಧ್ವನಿಸಿದಂತಾಗಿ ತಲೆಯ ಭಾಗಬಿಸಿಯಾಯ್ತು. ಮತ್ತೆ ಫೋನ್ ತೆಗೆದು ಡಾಟಾ ಆನ್ ಮಾಡಿದಾಗ 'ರಿಸಲ್ಟ್, ಟು ಬಿ ಸೂನ್' ಅನ್ನೊ ಸಾಲು ಸಾಲು ನೋಟಿಫಿಕೇಶನ್‌ಗಳು ಬರತೊಡಗಿದವು. ಮತ್ತೆ ಫೋನ್ ದಿಂಬಿಗಿಟ್ಟು ಸಮಯ ನೋಡಿದಾಗ ಒಂಬತ್ತು ಗಂಟೆ. ದಿನಾಲೂ ಏಳು ಗಂಟೆಗೆ ಲೈಬ್ರರಿ ಹೋಗುತ್ತಿದ್ದವನಿಗೆ ಇವತ್ತು ಕಾಲುಗಳು ಹೊರ ಹೋಗಲು ಹಿಂಜರಿಯುತ್ತಲೇ ಇದ್ದವು. ಆದರೂ ಲೈಬ್ರರಿ ಕಡೆಗೆ ಹೆಜ್ಜೆ ಹಾಕಿಯೇ ಬಿಡೋಣ ಅಂದುಕೊಂಡವನೇ ರೆಡಿಯಾಗಿ ಹೊರಟ.

* * *

ಹೀಗೆ...

ವರ್ಷದ ಹಿಂದೆ ಬಂದಿದ್ದ ರಾಯಣ್ಣ,

ಧಾರವಾಡ ಅಂದಾಗ ಸಾಹಿತ್ಯ, ಕಲೆ, ಸಂಗೀತ, ರಂಗಾಯಣ, ಬೇಂದ್ರೆ, ಕವಿಗಳು, ಬರಹಗಾರರು, ಕೆಸಿಡಿ ಕಾಲೇಜು, ಮಳೆ, ಹಸಿರು ಅಂತೆಲ್ಲ ಹಲವು ಗೆಳೆಯರ ಬಾಯಿಂದ ಕೇಳಿ ಉತ್ಸುಕನಾಗಿದ್ದ ರಾಯಣ್ಣ, ಕೊನೆಗೂ ಮನೆಯಲ್ಲಿ ಜಗಳವಾಡಿ ಧಾರವಾಡಕ್ಕೆ ಬಂದು ನಿಂತಿದ್ದ. ಪಿಜಿಯಲ್ಲಿ ರೂಮ್ ಮಾಡಿದರಾಯಿತು ಎಂದುಕೊಂಡವನಿಗೆ ಪಿಜಿ ರೆಂಟ್ ಕೇಳಿ ತಲೆತಿರುಗಿದಂತಾಗಿತ್ತು. ಹೇಗೂ ಸರಿದೂಗಿಸಿಕೊಂಡು ಒಂದು ತಿಂಗಳು ಪಿಜಿ ಮಾಡಿದ. ಅಲ್ಲೆ ಪಕ್ಕದಲ್ಲಿದ್ದ ಲೈಬ್ರರಿಗೂ ಹದಿನೈದುನೂರು ಫೀ ತುಂಬಿದ. ಮೊದಲು ಬಂದಾಗ ಅವನ ಕಣ್ಣಿಗೆ ಬಿದ್ದಿದ್ದು ಸಾಲು ಸಾಲಾಗಿರುವ ಕೋಚಿಂಗ್ ಸೆಂಟರ್ ಪೋಸ್ಟರ್‌ಗಳು, ಟೀ ಸೆಂಟರ್ ಪಾಯಿಂಟ್‌ಗಳು, ಕಾಂಪಿಟೇಟಿವ್ ಪುಸ್ತಕ ಹಿಡಿದಿರುವ ಕೈಗಳು. ಅಲ್ಲಲ್ಲಿ ಕೊಡೆಗಳಂತೆ ತಲೆಯೆತ್ತಿ ನಿಂತಿರುವ ಟಿಫಿನ್ ಸೆಂಟರ್ಸ್, ಆಶ್ಚರ್ಯ ಅನ್ನಿಸಿದ್ದು ಕೆಲವು ಟಿಫಿನ್ ಸೆಂಟರ್‌ಗಳನ್ನ ನಡೆಸುತ್ತಿರುವವರೂ ಕೂಡ ಓದೋಕೆ ಅಂತ ದೂರದೂರಿನಿಂದ ಬಂದ ವಿದ್ಯಾರ್ಥಿಗಳೇ!. ಇದೆಲ್ಲವನ್ನು ಗಮನಿಸಿದ ರಾಯಣ್ಣನಿಗೆ ಧಾರವಾಡದ ಇನ್ನೊಂದು ಮಗ್ಗುಲಿನ ಪರಿಚಯವಾಯಿತು. ಪಿಜಿಗೆ ತುಂಬುವ ರೆಂಟ್ ದುಬಾರಿ ಎನಿಸಿ ರೂಮ್ ಹುಡುಕಲು ಪ್ರಯತ್ನಿಸಿದ. ಓದುವಾಗ ಜೊತೆಯಾದ ಗೆಳೆಯನೊಬ್ಬನಿಗೆ ವಿಚಾರಿಸಿದಾಗ 'ಇಲ್ಲಿ ಇವಾಗ ರೂಮ್ ಸಿಗಾದು ಭಾಳ್ ಕಷ್ಟ ಆಗೈತ್ರಿ, ಭಾಳ ಮಂದಿ ಓದ್ಲಿಕಂತ ಬರಾಕತಾರ. ಅದ್ರಾಗೂ ಈಗ ಎಕ್ಸಾಮ್ಸ್ ಕರದಾರಲ ಭಾಳ ಮಂದಿ ಬರ್ತಾರ. ಈ